ಡಾ. ಮಿರ್ಜಾ ಬಷೀರ್

ಕಲೆ: ಸಂತೋಷ್ ಸಸಿಹಿತ್ಲು

# ಕೊಶ್ಚನ್ ಆಫ್ ಟೈಮ್

ಎಷ್ಟು ಕಷ್ಟಪಟ್ಟು ದುಡಿದು ಹೊಟ್ಟೆಬಟ್ಟೆ ಕಟ್ಟಿ ಬದುಕಿದ್ರೂ ಹೊಟ್ಟೆಗಿದ್ರೆ ಬಟ್ಟೆಗಿಲ್ಲ, ಬಟ್ಟೆಗಿದ್ರೆ ಹೊಟ್ಟೆಗಿಲ್ಲ ಎನ್ನುವಂಥ ಪರಿಸ್ಥಿತಿಯಲ್ಲಿ ಏಗಿ ಏಗಿ ಚಿಕ್ಕಮ್ಮನಿಗೆ ಸಾಕಾಗಿಹೋಗಿತ್ತು. ಎಂದೋ ಕಾಲವಾಗಿ ಹೋದ ತನ್ನ ಗಂಡನ ಪಾಲಿಗೆ ಪಿತ್ರಾರ್ಜಿತವಾಗಿ ಬಂದದ್ದು ಬರೀ ಹನ್ನೆರಡು ಮುದಿ ತೆಂಗಿನಮರಗಳು ಮತ್ತು ಅರ್ಧ ಗೋಡೆ, ಅರ್ಧ ತಡಿಕೆಯ ಮನೆ. ಅವಳ ಪರವಾಗಿದ್ದದ್ದು ಏನೆಂದರೆ ಮನೆತುಂಬ ಮಕ್ಕಳಿರದೆ ಒಬ್ಬನೇ ಮಗನಿದ್ದದ್ದು. ಅವನೇ ಲೋಕಿ. ತಾಯಿಯ ಮಾತುಗಳನ್ನು ತೆಗೆದು ಹಾಕದ ವಿಧೇಯ. ತನ್ನಮ್ಮ ಯಾವ ಶಬ್ದಗಳನ್ನು ಬಳಸಿ ಮಾತನಾಡುತ್ತಾಳೋ ಅದೇ ಶಬ್ದಗಳನ್ನು ಅವನೂ ಬಳಸಿ ಮಾತನಾಡುತ್ತಿದ್ದ. ತಾಯಿ ಮಾತನಾಡುತ್ತ ಆಗಾಗ ಬಾಯಿ ತೆರೆದು ಆಶ್ಚರ್ಯಭಾವ ವ್ಯಕ್ತಪಡಿಸಿದಂತೆ ಇವನೂ ಮಾಡುತ್ತಿದ್ದ. ಲೋಕಿಗೆ ಒಮ್ಮೊಮ್ಮೆ ಹೇಳಿದ್ದನ್ನೇ ಎರಡೆರಡು ಬಾರಿ ಹೇಳುವ ಅಭ್ಯಾಸವಿತ್ತು. ಇದರಿಂದ ಅವನು ಹೊಸಬರಿಗೆ ದಡ್ಡನೂ ಬುದ್ಧಿಮಾಂದ್ಯನೂ ಎನಿಸಿಬಿಡುತ್ತಿತ್ತು. ಆದರೆ, ಅವನು ಆ ಎರಡೂ ಆಗಿರದೆ ಸಹಜ ವ್ಯಕ್ತಿಯೇ ಆಗಿದ್ದ. ಸಾಮಾನ್ಯ ಜನರಿಗಿರುವಷ್ಟೇ ಬುದ್ಧಿಮತ್ತೆ ಇತ್ತು.

ಇಂಥ ಚಿಕ್ಕಮ್ಮನ ಮನೆಗೆ ಒಂದು ದಿನ ಬೆಳ್ಳಂಬೆಳಗ್ಗೆಯೇ ಲೋನ್ಲಿಂಗ ಬಂದ. ಲೋನ್ಲಿಂಗನಿಗೆ ತಾಲ್ಲೂಕಿನ ಎಲ್ಲ ಸರ್ಕಾರಿ ಇಲಾಖೆಗಳ ಅಧಿಕಾರಿಗಳು, ಬ್ಯಾಂಕ್ ಸಿಬ್ಬಂದಿ, ಎಮ್ಮೆಲ್ಲೆ, ಎಂಪಿ, ಪಕ್ಷಭೇದವಿಲ್ಲದೆ ಎಲ್ಲ ರಾಜಕೀಯ ಪುಢಾರಿಗಳು, ಕೆಲವು ಜಿಲ್ಲಾ ಮಟ್ಟದ ಅಧಿಕಾರಿಗಳ ನಿಕಟ ಪರಿಚಯವಿತ್ತು. ಪ್ರತಿ ಇಲಾಖೆಯಿಂದ ದೊರೆಯುವ ಸಾಲ ಸೌಲಭ್ಯಗಳನ್ನು ಇವನು ಬಲ್ಲವನಾಗಿದ್ದ. ಅಷ್ಟೇ ಅಲ್ಲ, ಇಲಾಖೆಗಳಿಗೆ ಸರ್ಕಾರದಿಂದ ನಿಗದಿಯಾದ ಗುರಿಗಳನ್ನು ಸಹ ತಿಳಿದಿದ್ದ. ಪತ್ರಕರ್ತರನ್ನು ಬೇಕಾದಂತೆ ಬಳಸಿಕೊಳ್ಳುವ ಚಾಕಚಕ್ಯತೆಯನ್ನು ಹೊಂದಿದ್ದ. ಹೆದರುವವರನ್ನು ಹೆದರಿಸುತ್ತಿದ್ದ. ಹೆದರಿಸಿದರೆ ಬೆಣ್ಣೆ ಹಚ್ಚಿ ಪಾರಾಗುತ್ತಿದ್ದ. ಒಟ್ಟಿನಲ್ಲಿ ಹಿಡಿದ ಕೆಲಸವಾವುದೂ ಹುಸಿ ಹೋಗುತ್ತಿರಲಿಲ್ಲ. ಅವನು ಎಂತಹ ಭಾಷೆ ಬೆಳೆಸಿಕೊಂಡಿದ್ದ ಎಂದರೆ ಎದುರಿದ್ದ ಅಧಿಕಾರಿಯ ಜಾತಿ, ಅವನ ಗಾಡ್‌ಫಾದರ್‌ಗಳು, ಕೆಲಸವಾಗಬೇಕಾದಲ್ಲಿ ಅವನ ರೇಟು ಮುಂತಾದ ಎಲ್ಲವನ್ನೂ ಅನಾಯಾಸವಾಗಿ ತಿಳಿದುಕೊಳ್ಳುತ್ತಿದ್ದ. ಯಾವುದೇ ಇಲಾಖೆಯ ಯಾವುದೇ ಸಾಲವನ್ನು ಕೊಡಿಸುವಲ್ಲಿ ಏಕಮೇವಾದ್ವಿತೀಯನಾಗಿದ್ದ ಲಿಂಗನಿಗೆ

